# ಮುಂದುವರೆದ ಭಾಷಾ ಪರೀಕ್ಷಣ
# (ನಮೂನೆ–1)

ಸಮಗ್ರ ಶಿಕ್ಷಣ – ಕರ್ನಾಟಕ

ಪ್ರಥಮ್

ಸಮಯ : 20 ನಿಮಿಷ

| ಕೆಳಗೆ ಕೊಟ್ಟಿರುವ ಕಥೆಯನ್ನು ಮಕ್ಕಳಿಂದ ಓದಿಸಿ ನಂತರ ಕೊಟ್ಟಿರುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ. |
|---|

## ಮರ

ಅಂದು ರಜಾ ದಿನವಾಗಿತ್ತು. ನೀಲು ಮನೆಯಲ್ಲಿ ಆಟವಾಡುತ್ತಿದ್ದಳು. ಕೆಲವೊಮ್ಮೆ ಅವಳು ಕಿಟಕಿಯ ಹೊರಗೆ ನೋಡುತ್ತಿದ್ದಳು ಮತ್ತು ಕೆಲವೊಮ್ಮೆ ಕಾಗದವನ್ನು ಹರಿದು ಆಟಿಕೆಗಳನ್ನು ಮಾಡಿಕೊಂಡು ಆಡುತ್ತಿದ್ದಳು. ಕಾಗದದ ಆಟಿಕೆಯೊಂದಿಗೆ ಆಟವಾಡುವಾಗ ಅವಳು ತುಂಬಾ ಸಂತೋಷಪಡುತ್ತಿದ್ದಳು. ಆ ಸಮಯಕ್ಕೆ ಅವಳ ತಾಯಿ ಅವಳ ಕೋಣೆಗೆ ಬಂದು ಅಲ್ಲಿ ಹರಿದು ಬಿದ್ದಿದ್ದ ಬಹಳಷ್ಟು ಕಾಗದದ ಚೂರುಗಳನ್ನು ನೋಡಿದರು. ಆಗ ತಾಯಿ ನೀಲಾಳನ್ನು ಕರೆದು ಹೇಳಿದರು – ಈ ದಿನ ನಾನು ನಿನಗೊಂದು ಕಥೆ ಹೇಳುತ್ತೇನೆ ಕೇಳು :–

ಒಂದು ದಿನ ನಾನು ನನ್ನ ತಂದೆಯೊಂದಿಗೆ ಪಕ್ಕದ ಊರಿಗೆ ಹೋಗುತ್ತಿದ್ದೆ. ಆಗ ದಾರಿಯಲ್ಲಿ ಕಡಿದ ಮರಗಳ ರಾಶಿಯನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇದನ್ನು ನನ್ನ ತಂದೆ ಗಮನಿಸಿದರು. ಅವರು ನನಗೆ ಆ ಕಡಿದಿದ್ದ ಮರಗಳನ್ನು ಕಾಗದದ ತಯಾರಿಕೆಗೆ ಬಳಸಲಾಗುತ್ತದೆ ಎಂದು ತಿಳಿಸಿದರು. ನಾವು ಬಳಸುವ ಮತ್ತು ಹಾಳು ಮಾಡುವ ಕಾಗದವು ಬಹಳಷ್ಟು ಮರಗಳಿಂದ ತಯಾರು ಆಗಿವೆ ಎಂದು ನನಗೆ ಆ ದಿನ ಅರ್ಥವಾಯಿತು. ಆದ್ದರಿಂದ ಕಾಗದವನ್ನು ಅವಶ್ಯಕತೆಗೆ ತಕ್ಕಂತೆ ಬಳಸಬೇಕು. ಮಿತವಾದ ಬಳಕೆಯಿಂದ ಕಾಗದವನ್ನು ಉಳಿಸಬಹುದು; ಅದರಿಂದ ಮರಗಳೂ ಉಳಿಯುತ್ತವೆ.

**ಪ್ರಶ್ನೆಗಳು :**

ಪ್ರಶ್ನೆ 1. ನೀಲು ರಜಾ ದಿನದಂದು ಮನೆಯಲ್ಲಿ ಏನು ಮಾಡುತ್ತಿದ್ದಳು?

ಪ್ರಶ್ನೆ 2. ನೀಲಾಳ ತಾಯಿಗೆ ಏಕೆ ಆಶ್ಚರ್ಯವಾಯಿತು?

ಪ್ರಶ್ನೆ 3. ಈ ಕಥೆಯ ಪ್ರಕಾರ ಏಕೆ ನಾವು ಕಾಗದವನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಬಳಸಬೇಕು?

# ಮುಂದುವರೆದ ಭಾಷಾ ಪರೀಕ್ಷಣ
# (ನಮೂನೆ-2)

ಸಮಗ್ರ ಶಿಕ್ಷಣ - ಕರ್ನಾಟಕ

ಸಮಯ: 20 ನಿಮಿಷ

ಕೆಳಗೆ ಕೊಟ್ಟಿರುವ ಕಥೆಯನ್ನು ಮಕ್ಕಳಿಂದ ಓದಿಸಿ ನಂತರ ಕೊಟ್ಟಿರುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ.

## ನೀರು

ಅಂದು ರಜಾ ದಿನವಾಗಿತ್ತು. ವಿಶಾಲು ತಾಯಿಗೆ ಮನೆಕೆಲಸದಲ್ಲಿ ಸಹಾಯ ಮಾಡುತ್ತಿದ್ದಳು. ಕೆಲವೊಮ್ಮೆ ಗಿಡಗಳಿಗೆ ನೀರುಣಿಸುತ್ತಿದ್ದಳು ಮತ್ತು ಕೆಲವೊಮ್ಮೆ ವರಾಂಡವನ್ನು ಸ್ವಚ್ಛಗೊಳಿಸುತ್ತಿದ್ದಳು. ಆ ದಿನ ಮನೆಯ ವರಾಂಡವನ್ನು ಸ್ವಚ್ಚಗೊಳಿಸುತ್ತಿದ್ದಾಗ ವಿಶಾಲು ನಲ್ಲಿಯ ನೀರನ್ನು ನಿಲ್ಲಿಸಲು ಮರೆತಳು. ಇದರಿಂದ ವರಾಂಡದಲ್ಲಿ ನೀರು ತುಂಬಿಕೊಂಡು ಕೊಳದಂತಾಯಿತು. ಆಗ ಅಮ್ಮ ವಿಶಾಲುವನ್ನು ಕರೆದು – ನಾನು ಈ ದಿನ ನಿನಗೊಂದು ಕಥೆ ಹೇಳುತ್ತೇನೆ ಕೇಳು:–

ಒಂದು ದಿನ ನಾನು ನನ್ನ ತಂದೆಯೊಂದಿಗೆ ಪಕ್ಕದ ಊರಿಗೆ ಹೋಗುತ್ತಿದ್ದೆ. ಆಗ ದಾರಿಯಲ್ಲಿ ಬಹಳಷ್ಟು ಒಣಗಿದ ಮರಗಳನ್ನು ಕಂಡು ನನಗೆ ಆಶ್ಚರ್ಯವಾಯಿತು. ಇದನ್ನು ನನ್ನ ತಂದೆ ಗಮನಿಸಿದರು. ಅವರು ಆ ಸ್ಥಳ ನೀರಿನ ಅಭಾವದಿಂದ ಬರಡಾಗಿದೆ ಎಂದು ನನಗೆ ಅರ್ಥ ಮಾಡಿಸಿದರು. ನಾವು ಹಾಳು ಮಾಡುವ ನೀರಿನ ಮಹತ್ವದ ಬಗ್ಗೆ ನನಗೆ ಆ ದಿನ ಅರ್ಥವಾಯಿತು. ಏಕೆಂದರೆ ಸಕಲ ಜೀವಿಗಳೂ ನೀರನ್ನು ಅವಲಂಬಿಸಿವೆ. ಮಿತವಾದ ಬಳಕೆಯಿಂದ ಸಾಕಷ್ಟು ನೀರನ್ನು ಉಳಿಸಬಹುದು.

ಪ್ರಶ್ನೆಗಳು:

ಪ್ರಶ್ನೆ 1. ವಿಶಾಲು ರಜಾ ದಿನದಂದು ಮನೆಯಲ್ಲಿ ಏನು ಮಾಡುತ್ತಿದ್ದಳು?

ಪ್ರಶ್ನೆ 2. ವಿಶಾಲು ಅವರ ತಾಯಿಗೆ ಏಕೆ ಆಶ್ಚರ್ಯವಾಯಿತು?

ಪ್ರಶ್ನೆ 3. ಈ ಕಥೆಯ ಪ್ರಕಾರ ನಾವು ನೀರನ್ನು ಏಕೆ ನಮ್ಮ ಅವಶ್ಯಕತೆಗೆ ತಕ್ಕಂತೆ ಬಳಸಬೇಕು?

# ಮುಂದುವರೆದ ಭಾಷಾ ಪರೀಕ್ಷಣ
# (ನಮೂನೆ–3)

ಸಮಗ್ರ ಶಿಕ್ಷಣ – ಕರ್ನಾಟಕ

ಪ್ರಥಮ್

ಸಮಯ: 20 ನಿಮಿಷ

**ಕೆಳಗೆ ಕೊಟ್ಟಿರುವ ಕಥೆಯನ್ನು ಮಕ್ಕಳಿಂದ ಓದಿಸಿ ನಂತರ ಕೊಟ್ಟಿರುವ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ.**

## ಕಸ

ಅಂದು ರಜಾ ದಿನವಾಗಿತ್ತು. ಯಮುನ ತನ್ನ ತಾಯಿಯ ಜೊತೆ ಅಂಗಡಿಗೆ ಹೋಗುತ್ತಿದ್ದಳು. ಅಂಗಡಿಗೆ ಹೋದಾಗ ತನ್ನ ತಾಯಿಯನ್ನು ಕೇಳಿ ಒಂದು ಬಿಸ್ಕೆಟ್ ಪ್ಯಾಕೆಟನ್ನು ಕೊಂಡಳು. ಮನೆಗೆ ಹಿಂದಿರುಗಿ ಬರುವ ಸಮಯದಲ್ಲಿ ರಸ್ತೆಯಲ್ಲೇ ಬಿಸ್ಕೆಟ್ ಪ್ಯಾಕೆಟ್ ಕವರನ್ನು ಬಿಸಾಕಿದಳು. ಇದನ್ನು ನೋಡಿದ ಯಮುನಾಳ ತಾಯಿ ಅವಳಿಗೆ ಹೇಳಿದಳು, ಈ ದಿನ ನಾನು ನಿನಗೊಂದು ಕಥೆ ಹೇಳುತ್ತೇನೆ ಕೇಳು :–

ಒಂದು ದಿನ ನಾನು ನನ್ನ ತಂದೆಯ ಜೊತೆ ಊರಿಗೆ ಹೋಗಿದ್ದೆ. ಅಲ್ಲಿ ರಸ್ತೆಯಲ್ಲಿ ಪ್ಲಾಸ್ಟಿಕ್ ಚೀಲಗಳು, ಪ್ಲಾಸ್ಟಿಕ್ ಬಾಟಲಿಗಳು ಮತ್ತು ಬೇಡವಾದ ವಸ್ತುಗಳು ಎಲ್ಲೆಂದರಲ್ಲಿ ಬಿಸಾಕಲಾಗಿತ್ತು. ಮೇಯಲು ಬಂದ ದನಕರುಗಳು ಇವುಗಳನ್ನು ಆಹಾರವೆಂದು ತಿನ್ನುತ್ತಿದ್ದವು. ಕಸದ ರಾಶಿಯ ಮೇಲೆ ಸೊಳ್ಳೆಗಳಿದ್ದುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇಂತಹ ಕಸದಿಂದ ರೋಗ ಹರಡಿ ಜನರಿಗೆ ಮತ್ತು ಪ್ರಾಣಿಗಳಿಗೆ ಹಾನಿ ಉಂಟಾಗುತ್ತದೆ. ಎಂದು ನನ್ನ ತಂದೆ ನನಗೆ ಅರ್ಥಮಾಡಿಸಿದರು. ನಮ್ಮ ಸುತ್ತಮುತ್ತಲ ಪರಿಸರವನ್ನು ಮಲಿನಗೊಳಿಸದೆ ಸ್ವಚ್ಛವಾಗಿಟ್ಟುಕೊಳ್ಳಬೇಕೆಂದು ನನಗೆ ಆ ದಿನ ಅರಿವಾಯಿತು.

**ಪ್ರಶ್ನೆಗಳು :**

**ಪ್ರಶ್ನೆ 1. ಯಮುನ ರಜಾ ದಿನದಂದು ಏನು ಮಾಡುತ್ತಿದ್ದಳು?**

**ಪ್ರಶ್ನೆ 2. ಯಮುನಾಳ ತಾಯಿಗೆ ಏಕೆ ಆಶ್ಚರ್ಯವಾಯಿತು?**

**ಪ್ರಶ್ನೆ 3. ಈ ಕಥೆಯ ಪ್ರಕಾರ ನಾವು ನಮ್ಮ ಸುತ್ತಮುತ್ತಲ ಪರಿಸರವನ್ನು ಏಕೆ ಸ್ವಚ್ಛವಾಗಿಟ್ಟುಕೊಳ್ಳಬೇಕು?**